ಸಿ.ಸಿ..ನಂ.269-22

ಪಿ.ಡಬ್ಲ್ಯೂ-1

ದಿನಾಂಕ.16-12-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣಿ ಕರಿಸಲಾಯಿತು.

**<u>ಮುಂದುವರೆದ ಪಾಟೀ ಸವಾಲುಃ</u>   ಆರೋಪಿ ಪರ ಶ್ರೀ   ವಿ.ವಿ.ಎಸ್        ವಕೀಲರಿಂದಃ**

1. ಬೋಟ ಗೆ ಸಾಲ ಕೊಟ್ಟಿರುತ್ತೇವೆ ಎಂದು ನೀವು ಹೇಳಿದಂತೆ ಆ ಸಮಯದಲ್ಲಿ ಆ ಬೋಟಿನ ಬೆಲೆ ಎಷ್ಟು ಆಗಿತ್ತು ಎಂದರೆ ನನಗೆ ನೆನಪಿಲ್ಲ. ಬೋಟಗೆ ಸಂಬಂಧಿಸಿದಂತೆ insurance ಮಾಡಬೇಕಾಗುತ್ತದೆ ಎಂದರೆ ಸರಿ . ಈ ಪರಕರಣಕ್ಕೆ ಸಂಬಂದಿಸಿದಂತೆ ಬೋಟ insurance ಮಾಡಲಾಗಿತ್ತಾ ಎಂದರೆ ಮಾಹಿತಿ ಇಲ್ಲ . ಸಾಲವನ್ನು ಮಂಜೂರು ಮಾಡಿದ ನಂತರ ಆ ಬೋಟ ಸಾಲಗಾರ ನಾಗರಾಜ ಹೆಸರಿಗೆ ಆಗಿರುತ್ತದೆ ಎಂದು ಅವರ RC ಪುಸ್ತಕ ನೋಡಿರುತ್ತಿರಾ ಎಂದರೆ ಹೌದು ಯಾವ ದಿನಾಂಕಂದು ನಾಗರಾಜ ಹೆಸರಿಗೆ ಬೋಟ ಆಗಿತ್ತು ಎಂದು ನಿಮಗೆ ಗೊತ್ತಾ ಎಂದರೆ ನನಗೆ ಈಗ ನೆನಪಿಲ್ಲ . ಸಾಕ್ಷಿ ಪುನಃ ಮುಂದುವರೆದು ಬೋಟಿನ ಅರ್ ಸಿ ಮೇಲೆ ಬೋಜಾ ಸಹ ದಾಖಲಾಗಿತ್ತು . ಬೊಜಾವನ್ನು ಮಿನುಗಾರಿಕೆ ಇಲಾಖೆಯಿಂದ ದಾಖಲು ಮಾಡಲಾಗಿತ್ತು . ಅದರ ಬಗೆಗ ಏನು ದಾಖಲಾತಿಯನ್ನು ಕೊಡಬೇಕಾಗುತ್ತದೆ ಎಂದರೆ ಅದರ ಬಗೆಗ ನನಗೆ ಮಾಹಿತಿ ಇಲ್ಲ . ಅದನ್ನು ಯಾರು ಕೊಟ್ಟು ಬೋಜಾ ಹಾಕಿಸಿಕೊಳ್ಳುತ್ತಾರೆ ಎಂದರೆ ಸಾಲಗಾರರೆ ಅದರ ಆರ್ ಸಿ ಮತ್ತು ಅದಕ್ಕೆ ಸಂಬಂಧಿಸಿದ ದಾಹಲಾತಿ ತಂದು ಕೊಟ್ಟು ಬೊಜಾ ಹಾಕಿ ಕೊಳ್ಳಲಾಗುತ್ತದೆ ಎಂದು ನುಡಿಯುತ್ತಾರೆ ಈ ರೀತಿಯ ಬೋಜಾ ಹಾಕಿಸಿಕೊಂಡರೆ ಒಪ್ಪಿಗೆ ಇಲ್ಲದೆ ಅದನ್ನು ಮಾರಾಟ ಮಾಡಲು ಬರುವುದಿಲ್ಲ ಮತ್ತು ಬೋಜಾ clear ಅಗದ ಹೊರತು ಆ ಬೋಟವನ್ನು ಮಾರಾಟ ಮಾಡಲು ಬರುವುದಿಲ್ಲ ಎಂದರೆ ಸಾರ್ವಜನಿಕ ಪ್ರಕಟಣೆ ನೀಡಿ ಸಂಸ್ಥೆ ಯ ನಿಯಮದಂತೆ ಆ ಬೋಟನ್ನು ಮಾರಾಟ ಬಹುದು . ಯಾವ ದಿನಾಂಕದಂದು ಅದನ್ನು ಮಾರಾಟ ಮಾಡಲಾಗಿದೆ ಎಂದು ನಾನು ದಾಖಲಾತಿ ನೋಡಿ ಕೊಂಡು ಬಂದಿದ್ದೆ ಆದರೆ ದಿನಾಂಕ ನೆನಪಿಲ್ಲ . ಬೋಟನ್ನು ಮಾರಾಟ ಮಾಡಿದ್ದು ಈ ಪ್ರಕರಣ ವಾದ ನಂತರ . ಬೊಟನ್ನು ಮಾರಾಟ ಮಾಡಿ ರೂ 3,80,000 ಹಣವನು ಪಡೆದು ಕೊಳ್ಳಲಾಗಿರುತ್ತದೆ ಎಂದು ನಿಮ್ಮ ನೋಟಿಸನಲ್ಲಾಗಲಿ ಪಿರ್ಯಾದಿಯಲ್ಲಾಗಲಿ ಸಾಕ್ಶ್ಯ ಪ್ರಮಾಣ ಪತ್ರದಲ್ಲಿ ಕಾಣಿಸಿಲ್ಲ ಎಂದರೆ ಸರಿ . ಈ

ಹರಾಜಿನಿಂದ ಬಂದ ಹಣನ್ನು ಸಾಲದ ಖಾತೆಗೆ ಜಮಾ ಮಾಡಲಾಗುತ್ತದೆ . ಸಾಲದ ಖಾತೆಯನ್ನು ನ್ಯಾಯಾಲಯದ ಮುಂದೆ ಹಾಜರ ಪಡಿಸಲಾಗಿರುತ್ತದೆ ಅದು ನಿಪಿ-7 ಎಂದು ನಿಶಾನೆ ಗೊಳಪಡಿಸಲಾಗಿರುತ್ತದೆ . ನಿಪಿ-7 ರಲ್ಲಿ ರೂ 3,80,000 ನಮೂದು ಇಲ್ಲ ಎಂದರೆ ಸದ್ರಿ ನಿಪಿ-7 ರಲ್ಲಿ ದಿಃ9-1-2019 ರ ವರೆಗೆ ನಮೂದು ಆಗಿರುತ್ತದೆ ಅದರ ನಂತರದ್ದು ನಮೂದು ಅಗಿಲ್ಲ ಸದ್ರಿ ಬೋಟ ವನ್ನು ಈ ದಿನಾಂಕದ ನಂತರದಲ್ಲಿ ಹರಾಜು ಮಾಡಲಾಗಿರುತ್ತದೆ . ಮುಂದುವರೆದ ಖಾತೆಯನ್ನು ನ್ಯಾಯಾಲಯದ ಮುಂದೆ ಹಾಜರ ಪಡಿಸಲು ನಿಮಗೆ ಯಾವುದೆ ತೊಂದರೆ ಇಲ್ಲ ಎಂದರೆ ಸರಿ .

2. ಬೋಟ ಎಂಬುದು ವಾಣಿಜ್ಯ ವಾಹನ ಎಂದರೆ ನನಗೆ ಮಾಹಿತಿ ಇಲ . ವಾಹನಗಳು ವಿವಿಧ ರೂಪದಲ್ಲಿ ಬರುತ್ತದೆ ಅವುಗಳು ಮನೆ ಬಳಕೆಗೆ ವಾಣಿಜ್ಯ ಬಳಕೆಗೆ ಬರುತ್ತವೆ ಎಂದರೆ ನನಗೆ ಮಾಹಿತಿ ಇಲ್ಲ ಹೈಪೊಥಿಕೇಷನ್ ಬಗ್ಗೆ ನನಗೆ ಮಾಹಿತಿ ಇರುತ್ತದೆ . ಹೈಪೊಥಿಕೇಷನ್ ಮಾಡುವ ಸಮಯದಲ್ಲಿ ವಾಣಿಜ್ಯ ವಾಹನಕ್ಕೆ ಬೇರೆ ರೀತಿಯಾದ ಬೆಲೆ ಕಟ್ಟಿ ಹೈಪೊಥಿಕೇಷನ್ ಮಾಡುತ್ತಾರೆ ಡೊಮೆಸ್ಟಿಕ ವಾಹನಕ್ಕೆ ಬೇರೆ ರೀತಿಯಾದ ಬೆಲೆ ಕಟ್ಟಿ ಹೈಪೊಥಿಕೇಷನ್ ಮಾಡುತ್ತಾರೆ ಎಂದರೆ ನನಗೆ ಮಾಹಿತಿ ಇಲ್ಲ . ಈ ಪ್ರಕರಣಕ್ಕೆ ಸಂಬಂದಿಸಿದಂತೆ ಹೈಪೊಥಿಕೇಷನ್ ಮಾಡಲಾಗಿರುತ್ತದೆ . ಹೈಪೊಥಿಕೇಷನ್ ಮಾಡಬೇಕಾದರೆ ನಿಗದಿತ ಮೊತ್ತದ ಸ್ಟಾಂಪ ಪೇಪರ ಬೇಕು ಎಂದರೆ ಅದನ್ನು ಶಾಖಾ ವ್ಯವಸ್ಥಾಪಕರು ಮಾಡುತ್ತಾರೆ ನನಗೆ ಮಾಹಿತಿ ಇಲ್ಲ . ಹೈಪೊಥಿಕೇಷನ್ ಪೇಪರ ವನ್ನು ನೋದಣಿ ಮಾಡಬೇಕು ಎಂಬ ಬಗ್ಗೆ ನನಗೆ ಮಾಹಿತಿ ಇರುತ್ತದೆ . ಹೈಪೊಥಿಕೇಷನ್ ಮಾಡುವ ಸಮಯದಲ್ಲಿ ನಿಗದಿತ ವಾಹನಕ್ಕೆ ಸಂಭಂಧಿಸಿದಂತೆ ವಾಹನದ ಮೌಲ್ಯದ ಆಧಾರದಲ್ಲಿ ನೋಂದಣಿ ಶುಲ್ಕ ಪಾವತಿಸಬೇಕಾಗುತ್ತದೆ ಎಂದರೆ ಸರಿ . ಈ ಪ್ರಕರಣಕ್ಕೆ ಸಂಬಂಧಿಸಿದಂತೆ ವಾಹನದ ಮೌಲ್ಯ ಮತ್ತು ನೊಂದಣಿ ಶುಲ್ಕ ಕಟ್ಟಿದ ಬಗ್ಗೆ ನಿಮಗೆ ಮಾಹಿತಿ ಇದೆಯಾ ಎಂದರೆ ಹೌದು . ಮೀನುಗಾರಿಕೆ ಇಲಾಖೆಯಲ್ಲಿ ಯಾವ ರೀತಿಯಾದ ನೊಂದಣಿ ಇರುತ್ತದೆಯೋ ಅದರ ಪ್ರಕಾರವಾಗಿ ನೋಂದಣಿ ಮಾಡಿರುತ್ತೇವೆ . ಮೀನುಗಾರಿಕೆಯಲ್ಲಿ ನೋಂದಣಿ ಮಾಡಿದ ದಾಖಲಾತಿ ನಿಮ್ಮ ಬಳಿ ಇರುತ್ತದೆಯಾ ಎಂದರೆ ಇಲ್ಲ ಅದು ಈಗ ಹರಾಜು ಪ್ರಕ್ರಿಯೆಯಲ್ಲಿ ಮಾರಾಟ ವಾಗಿದೆ . ಮೀನುಗಾರಿಕೆ ಇಲಾಖೆಯಲ್ಲಿ ನೋಂದಣ ಮಾಡಿಸಿ ಕೊಂಡಿರುವುದರಿಂದ ಹರಾಜು ಮಾಡುವಾಗ ಅದನ್ನೆಲ್ಲಾ cancel

ಮಾಡಿ ಕೊಂಡು ಬರಬೇಕು ಎಂದರೆ ತೆಗೆದು ಕೊಂಡವನು ಅದನ್ನೆಲ್ಲಾ cancel ಮಾಡಿಕೊಂಡು ಬರುತ್ತಾನೆ ಅದೆ ರೀತಿ ಹರಾಜಿನಲ್ಲಿ ಅತ್ಯಧಿಕ ಮೌಲ್ಯಕ್ಕೆ ಬೋಟನ್ನು ಖರೀದಿ ಮಾಡಿದವನಿಗೆ ಹೈಪೊಥಿಕೇಷನ್ cancel ವಾದ ದಾಖಲಾತಿ ಕೊಡಬೇಕು ಎಂದರೆ ಸ ರಿ . ಈ ಪ್ರಕರಣ ದಲ್ಲಿ ಹೈಪೊಥಿಕೇಷನ್ ಗೆ ಬೊಟನ್ನು ಪಡೆದುಕೊಂಡ ಬಗ್ಗೆ ಹಾಗೂ ಅದನ್ನು cancel ಮಾಡಿದ ಬಗ್ಗೆ ದಾಖಲಾತಿ ಯನ್ನು ನ್ಯಾಯಾಲಯಕ್ಕೆ ಯಾವುದೆ ತೊಂದರೆ ಇಲ್ಲ ಎಂದರೆ ಸರಿ .

3. ನಾಗರಾಜನಿಗೆ ಸಾಲ ಕೊಟ್ಟಿದ್ದೇನೆ ಎಂದು ಹೇಳಿದ್ದೀರಿ ಅದನು ಯಾವ ರೀತಿಯಾಗಿ ಸಂದಾಯ ಮಾಡಿದ್ದೀರಿ ಎಂದರೆ ಅದನ್ನು ಅತನ ಉಳಿತಾಯ ಖಾತೆಗ ಹಾಕಿರುತ್ತೇನೆ . ಉಳಿತಾಯ ಖಾತೆಯಿಂದ ಆತನು ಹೇಗೆ ಆ ಹಣವನ್ನು ಪಡೆದುಕೊಂಡಿರುತ್ತಾನೆ ಎಂದು ನನಗೆ ನೆನಪಿಲ್ಲ . ಆ ಉಳಿತಾಯ ಖಾತೆಯಿಂದ ಆತನು ಹಣ ಪಡೆದುಕೊಂಡ ಬಗ್ಗೆ ದಾಖಲಾತಿ ಗಳು ನಿಮ್ಮ ಸಂಸ್ಥೆ, ಯಲ್ಲಿ ಇರುತ್ತದೆ ಎಂದರೆ ಸರಿ . ಅವುಗಳನ್ನು ನ್ಯಾಯಾಲಯಕ್ಕೆ ಹಾಜರ ಪಡಿಸಲು ನಿಮಗೆ ತೊಂದರೆ ಇಲ್ಲ ಎಂದರೆ ಅವುಗಳನ್ನೆಲ್ಲಾ ABN ಪ್ರಕರಣದಲ್ಲಿ ಹಾಜರ ಪಡಿಸಿದ್ದೇವೆ ಅವಶ್ಯ ಇದ್ದರೆ ಈ ಪ್ರಕರಣದಲ್ಲಿ ಹಾಜರ ಪಡಿಸುತ್ತೇನೆ

( ಈ ಹಂತದಲ್ಲಿ ಆರೋಪಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು , ಕಾಲಾವಕಾಶ ನೀಡಲಾಯಿತು .)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಅಂಕೋಲಾ.